[ Govt. of Karnataka C.R.P. 67]

**Deposition Sheets (RP.No.57)**
**Form No.4 (Civil)**

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 1405/2024**

ಪಿಡ್ಯೂಃ 3 ಸಿಡ್ಲ್ಯೂಃ 3

ಸಾಕ್ಷಿದಾರನ ಹೆಸರು: ಅಜಿತ್ ಹೆಗ್ಡೆ
ತಂದೆಯ ಹೆಸರು: ರಾಜೀವ ಹೆಗ್ಡೆ
ಪ್ರಾಯ: 35 ವರ್ಷ
ಉದ್ಯೋಗ: ಮುಖ್ಯ ಪೇದೆ ಕೋಟ ಪೊಲೀಸ್ ಠಾಣೆ
ವಾಸ : ಹೆಬ್ರಿ

ದಿನಾಂಕ 06.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು 2019 ರಿಂದ 2014 ರವರೆಗೆ ಹೆಬ್ರಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

ದಿಃ 23.06.2024 ರಂದು ಚಾಸಾ-1 ರವರೊಂದಿಗೆ ಠಾಣಾ ವಾಹನದಲ್ಲಿ ರೌಂಡ್ ನಲ್ಲಿ ಇದ್ದಾಗ ಚಾಸಾ-2 ರವರು ಬೀಟ್ ನಲ್ಲಿದ್ದಾಗ ಚಾಸಾ-1 ರವರಿಗೆ ಫೋನ್ ಮುಖಾಂತರ ನಾಡ್ಪಲ್ ಗ್ರಾಮದ ಸೋಮೇಶ್ವರ ಕಾಸನಮಕ್ಕಿ ಕ್ರಾಸ್ ನ ಬಳಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಎಂದು ಮಾಹಿತಿ ನೀಡಿರುತ್ತಾರೆ. ಸೋಮೇಶ್ವರ ರಸ್ತೆಯಲ್ಲಿ ಚಾಸಾ-5 ಮತ್ತು 6 ರವರು ಮೋಟಾರು ಸೈಕಲ್ ನಲ್ಲಿ ಇದ್ದು ಅವರನ್ನು ಪಂಚರನ್ನಾಗಿ ಬರಲು ಚಾಸಾ-1 ರವರು ನೋಟಿಸು ನೀಡಿರುತ್ತಾರೆ. ಚಾಸಾ-5 ಮತ್ತು 6 ರವರನ್ನು ನಮ್ಮೊಟ್ಟಿಗೆ ಠಾಣಾ ವಾಹನದಲ್ಲಿ ತಕ್ಷೀರು ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ.

ಅಲ್ಲಿ ಹೋದ ನಂತರ ಚಾಸಾ-1, 2 ಮತ್ತು ನಾವುಗಳು ವಾಹನವನ್ನು ಮರೆಯಲ್ಲಿ ಇಟ್ಟು ನಾವೆಲ್ಲರೂ ಮರೆಯಲ್ಲಿ ನೋಡಿರುತ್ತೇವೆ. ಆಗ ಅಲ್ಲಿ ಓರ್ವ ವ್ಯಕ್ತಿ ಸೋಮೇಶ್ವರದ

ಕಾಸನಮಕ್ಕಿಯ ಒಂದು ಅಂಗಡಿಯ ಹಿಂದೆ ನಿಂತುಕೊಂಡು ಮದ್ಯದ ಸ್ಯಾಚೆಟ್ ಗಳನ್ನು 2-3 ಗ್ರಾಹಕರಿಗೆ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಮಧ್ಯಾಹ್ನ 2.15 ಗಂಟೆಗೆ ನಾವು ತಕ್ಷೀರು ಸ್ಥಳಕ್ಕೆ ದಾಳಿ ನಡೆಸಿರುತ್ತೇವೆ. ಆಗ ಅಲ್ಲಿದ್ದ 2-3 ಗಿರಾಕಿಗಳು ಓಡಿ ಹೋಗಿರುತ್ತಾರೆ. ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದಿರುತ್ತೇವೆ. ಆತನ ಹೆಸರು ವಿಳಾಸವನ್ನುಕೇಳಿದಾಗ ಆತನ ಹೆಸರು ಪ್ರಶಾಂತ್ ಪೂಜಾರಿ ಎಂದು ತಿಳಿಸಿರುತ್ತಾನೆ. ಆತನ ಬಳಿ ಇದ್ದ ಚೀಲವನ್ನು ನೋಡಿದಾಗ ಅದರಲ್ಲಿ ಮದ್ಯದ ಸ್ಯಾಚೆಟ್ ಗಳು ಇದ್ದವು. ಆತನ ಬಳಿ ಮಾರಾಟ ಮಾಡಿ ಬಂದ ಹಣ ರೂ.930/- ಇರುತ್ತದೆ.

ಚೀಲದಲ್ಲಿದ್ದ ಮದ್ಯವನ್ನು ಪಂಚರ ಸಮಕ್ಷಮ ಸ್ವಾ ಧೀನಪಡಿಸಿಕೊಂಡಿರುತ್ತೇನೆ. 90 ಎಂ ಎಲ್ ನ ಮೈಸೂರು ಲ್ಯಾನ್ಸರ್ ವಿಸ್ಕಿ-22 ಸ್ಯಾಚೆಟ್ ಗಳು, 90 ಎಂ ಎಲ್ ನ ಡಬ್ಬಲ್ ಕಿಕ್ ಫೈನ್ ವಿಸ್ಕಿ-2 ಪ್ಯಾಕೆಟ್, 90 ಎಂ ಎಲ್ ನ ಒರಿಜಿನಲ್ ಚಾಯಿಸ್ -6 ಪ್ಯಾಕೆಟ್, 90 ಎಂ ಎಲ್ ನ ಒಲ್ಡ್ ಮಾಂಕ್ -5 ಪ್ಯಾಕೆಟ್, 180 ಎಂ ಎಲ್ ನ ಡಿ ಎಸ್ ಪಿ ಬ್ಲಾಕ್ ಡಿಲಕ್ಸ್ ವಿಸ್ಕಿ-5 ಗಾಜಿನ ಬಾಟಲ್, ಬಿಳಿ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲ, 100 /- ಮುಖ ಬೆಲೆಯ 5, 50 ಮುಖ ಬೆಲೆಯ 8, 10 ಮುಖ ಬೆಲೆಯ 3 ಒಟ್ಟು ನಗದು ರೂ.930/- ಮಹಜರು ಮುಖೇನ ಸ್ವಾ ಧೀನಪಡಿಸಿಕೊಂಡಿರುತ್ತೇನೆ. ಸದ್ರಿ ಮಹಜರನ್ನು ಮಧ್ಯಾಹ್ನ 2.30 ರಿಂದ 3.30 ರವರೆಗೆ ಮಾಡಿರುತ್ತೇನೆ. ಸದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ.ಈಗ ನಾನು ಸದ್ರಿ ಮಹಜರನ್ನು ಹಾಗೂ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ಮಹಜರನ್ನು ಈಗಾಗಲೇ ನಿಪಿ-1 ಎಂ ದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂ ದು ಗುರುತಿಸಲಾಯಿತು. ನಿಪಿ-2 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತೇನೆ. ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಸ್ವಾಧೀನಪಡಿಸಿಕೊಂಡ ಮು ಮಾ 1 ರಿಂದ 7 ಸ್ವತ್ತುಗಳನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದ ಃ

ದಿಃ23.06.2024 ರಂದು ನಾನು, ಚಾಸಾ-1, ಚಾಸಾ-4 ಠಾಣಾ ವಾಹನದಲ್ಲಿ ಸೀತಾ ನದಿ ಸೋಮೇಶ್ವರದ ಬಳಿ ರೌಂಡ್ ನಲ್ಲಿ ಇದ್ದೇವು. ತಕ್ಷೀರು ಸ್ಥಳದಿಂದ ನಾವು ಎಷ್ಟು ದೂರದಲ್ಲಿ ಇದ್ದೇವು ಗೊತ್ತಿಲ್ಲ. ಚಾಸಾ-1 ರವರಿಗೆ 1.45 ಗಂಟೆಗೆ ಮಾಹಿತಿ ಬಂದಿರುತ್ತದೆ.

ನಾವು ತಕ್ಷೀರು ಸ್ಥಳಕ್ಕೆ 2.00 ಗಂಟಗೆ ತಲುಪಿರುತ್ತೇವೆ. ಕಾಲು ಗಂಟೆ ನಾವೆಲ್ಲರೂ ನಿಂತು ನೋಡಿರುತ್ತೇವೆ. ಸುಮಾರು ಮಧ್ಯಾಹ್ಣ 1.50 ಗಂಟೆಗೆ ಚಾಸಾ-5 ಮತ್ತು 6 ರವರು ನಮಗೆ ಸೀತಾನದಿ ರಸ್ತೆಯಲ್ಲಿ ಸಿಕ್ಕಿರುತ್ತಾರೆ ಮತ್ತು ಚಾಸಾ-1 ರವರು ಪಂಚರಾಗಲು ನೋಟಿಸನ್ನು ನೀಡಿರುತ್ತಾರೆ.

3-4 ಜನ ಗಿರಾಕಿಗಳು ಇದ್ದರು. ನನಗೆ ಅವರ ಮುಖ ಪರಿಚಯ ಇರುವುದಿಲ್ಲ. 4 ಜನ ಮದ್ಯವನ್ನು ಖರೀದಿ ಮಾಡುತ್ತಿದ್ದರು. ಸ್ಥಳದಲ್ಲಿ ಯಾವುದೇ ಖಾಲಿ ಸ್ಯಾಚೆಟ್ ಸಿಕ್ಕಿರುವುದು ನನಗೆ ನೆನಪಿಲ್ಲ. ನಾವು ಸ್ಥಳದಲ್ಲಿ 2.15 ರಿಂದ 3.30 ಗಂಟೆಯವರೆಗೆ ಇದ್ದೇವು. ನಿಪಿ-1 ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿಪಿ-2 ನ್ನು ಚಾಸಾ-2 ತೆಗೆದಿರುತ್ತಾರೆ. ಸದ್ರಿ ಫೋಟೊದಲ್ಲಿ ನಾನು ಮತ್ತು ಚಾಸಾ-4 ಕಾಣುವುದಿಲ್ಲ. ಸ್ಥಳದಲ್ಲಿದ್ದ ಅಂಗಡಿ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. 4 ಜನ ಗಿರಾಕಿಗಳು ಇದ್ದ ಬಗ್ಗೆ ನಾನು ನ್ಯಾಯಾಲಯದ ಮುಂದೆ ಪ್ರಥಮ ಬಾರಿಗೆ ಹೇಳುತ್ತಿದ್ದೇನೆ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಮು ಮಾ-1 ರಿಂದ 7 ಅಂಗಡಿಯ ಹಿಂಭಾಗದಲ್ಲಿ ಇತ್ತು.

ನಾನು ನಿಪಿ-1 ರಂತೆ ಮಹಜರನ್ನು ಮಾಡುವಾಗ ಇರಲಿಲ್ಲ, ಮುಖ್ಯ ವಿಚಾರಣೆಯಲ್ಲಿ ಹೇಳಿದ ದಾಳಿಯನ್ನು ಮಾಡಿರುವುದಿಲ್ಲ, ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ, ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಿಗೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಮತ್ತು ಠಾಣೆಯ ಅಂಕಿ ಅಂಶಕ್ಕೋಸ್ಕರ ಈ ಪ್ರಕರಣ ದಾಖಲು ಮಾಡಿರುತ್ತೇವೆ ಮತ್ತು ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ